# ಎನ್‌ಐಟಿಕೆ: ರಾಷ್ಟ್ರೀಯ ಯುವ ದಿನಾಚರಣೆ



**ಸುರತ್ಕಲ್, ಜ. 13:** ಎನ್‌ಐಟಿಕೆ ಸುರತ್ಕಲ್‌ನಲ್ಲಿ ಎನ್‌ಐಟಿಕೆ ಎನ್‌ಎಸ್‌ಎಸ್ ಘಟಕವು ಯುವಕರ ಸಾಮರ್ಥ್ಯ ಮತ್ತು ಸಮಾಜಕ್ಕೆ ಅವರು ನೀಡಿದ ಕೊಡುಗೆಗಳನ್ನು ಗೌರವಿಸಲು ಗುರುವಾರ ರಾಷ್ಟ್ರೀಯ ಯುವ ದಿನ ಆಚರಿಸಲಾಯಿತು.

ಎಂಐಟಿ ಮಣಿಪಾಲದ ಸಹ ಪ್ರಾಧ್ಯಾಪಕ ಪ್ರೊ| ವಾದಿರಾಜ ಭಟ್ಟ ಜಿ.ಆರ್. ಮುಖ್ಯ ಅತಿಥಿಯಾಗಿದ್ದರು. ಈ ಸಂದರ್ಭ ಪ್ರಭಾರಿ ನಿರ್ದೇಶಕರು ಹಾಗೂ ಕಲ್ಯಾಣ ವಿಭಾಗದ ಡೀನ್ ಪ್ರೊ| ಜಿ.ಸಿ. ಮೋಹನ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರೀಯ ಯುವ ದಿನಾಚರಣೆಯನ್ನು ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು, ತ್ರಿಭಾಷಾ ಭಾಷಣಗಳು, ಆಯೋಜಿಸಲಾದ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜಕ ಡಾ| ವೀರಶೆಟ್ಟಿ ಗುಮಟಾಪುರೆ, ಎನ್‌ಎಸ್‌ಎಸ್ ಅಧಿಕಾರಿಗಳು, ಜಂಟಿ ರಿಜಿಸ್ಟ್ರಾರ್, ಅಸೋಸಿಯೇಟ್ ಡೀನ್ ಎಸ್‌ಡಬ್ಲ್ಯು, ಅಸೋಸಿಯೇಟ್ ಡೀನ್ ಎಐಆರ್, ಬೋಧಕ ಮತ್ತು ಬೋಧಕೇತರ ಸಿಬಂದಿ, ಮತ್ತು ನೂರಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Udayavani, Date:14/01/23, p. no - Sudin 02